ಚಿಕ್ಕೋಡಿ ತಾಲ್ಲೂಕಿನಲ್ಲಿ ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸುವುದರ ಬಗ್ಗೆ

1629 (1921) : ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ (ಚಿಕ್ಕೋಡಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಚಿಕ್ಕೋಡಿ ತಾಲ್ಲೂಕಿನಲ್ಲಿ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಅಳತೆಯ ಎಷ್ಟು ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲಾಗಿದೆ;

(ಆ) ಮೇಲ್ಕಂಡ ಎಲ್ಲಾ ಷೆಡ್ಡುಗಳನ್ನು ಹಂಚಿಕೆ ಮಾಡಲಾಗಿದೆಯೇ;

(ಇ) ಹಂಚಿಕೆ ಮಾಡಿದ್ದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಎಷ್ಟು ಜನರಿಗೆ ಯಾವ ಅಳತೆಯ ನಿವೇಶನಗಳು ಹಂಚಿಕೆಯಾಗಿರುವುದು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

(ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ನಿ) ವು ಕೈಗಾರಿಕಾ ವಸಾಹತು ಹಿರೇಕೋಡಿ ಗ್ರಾಮ, ಚಿಕ್ಕೋಡಿ ಕಸಬದಲ್ಲಿ 4 'ಎಸ್. ಎಂ' (480 ಚ. ಅ) 4 'ಸಿ' (1500 ಚ. ಅ) ಮತ್ತು 4 'ಎಸ್. ಎಂ' (480 ಚ. ಅ) ಮಳಿಗೆಗಳನ್ನು ಕೈಗಾರಿಕಾ ವಸಾಹತು ಜತ್‌ರತ್ ಗ್ರಾಮ ನಿಪ್ಪಾಣಿ ಹೋಬಳಿಯಲ್ಲಿ ನಿರ್ಮಿಸಿದೆ.

(ಆ) ಚಿಕ್ಕೋಡಿ ಮತ್ತು ನಿಪ್ಪಾಣಿ ಕೈಗಾರಿಕಾ ವಸಾಹತುವಿನಲ್ಲಿ ಎಲ್ಲಾ ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ.

(ಇ) ಚಿಕ್ಕೋಡಿಯಲ್ಲಿ ಮೂರು ನಿವೇಶನಗಳನ್ನು (378 ಚ. ಮಿ) ಪರಿಶಿಷ್ಟ ವರ್ಗದ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗಿದೆ. 4 'ಎಸ್. ಎಂ' ಮಳಿಗೆಗಳನ್ನು ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗಿದ್ದು ಅವರು ಸ್ವಾದೀನ ಪಡೆದಿರುವುದಿಲ್ಲ. ನಿಪ್ಪಾಣಿ ಕೈಗಾರಿಕಾ ವಸಾಹತುವಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಉದ್ದಿಮೆದಾರರು ಹಂಚಿಕೆಗೆ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ.

ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ಸೌಲಭ್ಯ

1630 (1898) : ಶ್ರೀ ಖಾದ್ರಿ. ಎಸ್. ಎಸ್. (ಶಿಗ್ಗಾಂವ್) : ಮಾನ್ಯ ನಗರಾಬಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಶಿಗ್ಗಾಂವ್ ಮತ್ತು ಬಂಕಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು;

(ಈ) ಈ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಬಂದಿದೆ.

(ಆ) ಶಿಗ್ಗಾಂವ್ ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ನೀರಿನ ತೊಂದರೆಯನ್ನು ನೀಗಿಸಲು, ವರದಾ ನದಿಯನ್ನು ಮೂಲವಾಗಿಟ್ಟುಕೊಂಡು ತಯಾರಿಸಿದ ನೀರು ಸರಬರಾಜು ಯೋಜನೆಯ ಅಂದಾಜು ವೆಚ್ಚ ರೂ. 745 ಲಕ್ಷಕ್ಕೆ ಸರ್ಕಾರವು 1991 ರಲ್ಲಿ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯಡಿ ಜಲಗಾರ ತೊಟ್ಟಿ (ಇಮ್‌ಪೌಂಡಿಂಗ್ ರಿಸರ್‌ವಾಯರ್) ನಿರ್ಮಿಸಲು ಬೇಕಾದ ಭೂಮಿ ಸಿಗದ ಪ್ರಯುಕ್ತ, ಶಿಗ್ಗಾಂವ್ ಬಳಿ ಹಾಲಿ ಇರುವ ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟ ನಾಗನೂರು ಕೆರೆಯನ್ನು ಮೂಲವಾಗಿಟ್ಟುಕೊಂಡು ಮಾರ್ಪಾಡು ಅಂದಾಜನ್ನು ರೂ. 1793 ಲಕ್ಷಗಳಿಗೆ ತಯಾರಿಸಿ ಬಂಕಾಪುರ ಪ್ಲೋರೇಟಾ ಹಣ ರೂ. 474 ರೂ. 474.64 ತುಂಬಲು ಸರ್ಕಾರದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಇವರ ಒಪ್ಪಿಗೆ ಕೋರಲಾಯಿತು. ಆದರೆ ಆರ್. ಡಿ. ಪಿ. ಆರ್. ಇಲಾಖೆಯವರು ಬಂಕಾಪುರ ಪಟ್ಟಣವನ್ನು ಯೋಜನೆಯಿಂದ ಕೈಬಿಡಲು ಕೋರಿದ ಪ್ರಯುಕ್ತ ಬಂಕಾಪುರ ಪಟ್ಟಣವನ್ನು ಯೋಜನೆಯಿಂದ ಕೈಬಿಟ್ಟು ಶಿಗ್ಗಾಂವ್ ಮತ್ತು ಸವಣೂರು ಪಟ್ಟಣಕ್ಕೆ ನಾಗನೂರು ಕೆರೆಯನ್ನು ಮೂಲವಾಗಿಟ್ಟುಕೊಂಡು ಪ್ರತ್ಯೇಕ ಯೋಜನೆಯನ್ನು ರೂ.1232.00 ಲಕ್ಷಗಳಿಗೆ ತಯಾರಿಸಿದೆ. ಈ ಮಧ್ಯೆ ಸದರಿ ಯೋಜನೆಯ ಮುಖ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಯೋಜನೆಯನ್ನು 2000-2001 ರಲ್ಲಿ ಚಾಲ್ತಿಗೊಳಿಸಲು ಯೋಜಿಸಲಾಗಿದೆ. ಈ ಯೋಜನೆ ಕಾರ್ಯಗತವಾದನಂತರ ಶಿಗ್ಗಾಂವ್ ಹಾಗೂ ಸವಣೂರು ಪಟ್ಟಣದ ನೀರಿನ ತೊಂದರೆ ನೀಗುತ್ತದೆ.

ಬಂಕಾಪುರ ಪಟ್ಟಣಕ್ಕೆ ನೀರಿನ ತೊಂದರೆ ನೀಗಿಸಲು ಪ್ರತ್ಯೇಕ ಯೋಜನೆಯನ್ನು ಕೊಳವೆ ಬಾವಿಗಳನ್ನು ಮೂಲವಾಗಿಟ್ಟುಕೊಂಡು ರೂ. 376.20 ಲಕ್ಷಗಳಿಗೆ ಮಂಡಲಿಯಲ್ಲಿ ತಯಾರಿಸಲಾಗುತ್ತಿದೆ.

ಶಿಗ್ಗಾಂವ್

ಸವಣೂರು ರೂ. 1232.00 ಲಕ್ಷಗಳು.

ಬಂಕಾಪುರ ಪಟ್ಟಣಕ್ಕೆ ತಯಾರಿಸಿರುವ ಅಂದಾಜು ಮೊತ್ತ ರೂ. 376.20 ಲಕ್ಷಗಳು

(ಈ) ಶಿಗ್ಗಾಂವ್ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಈಗಾಗಲೇ ಪ್ರಗತಿಯಲ್ಲಿದ್ದು 2000-2001 ರಲ್ಲಿ ಚಾಲ್ತಿಗೊಳಿಸಲಾಗುವುದು.

ಎ. ಡಿ. ಬಿ. ಯಿಂದ ಆರ್ಥಿಕ ಸಹಾಯದ ಬಗ್ಗೆ

1632 (1873) : ಶ್ರೀ ಮೋಹನ್ ಕೆ. ಶೆಟ್ಟಿ (ಕುಮಟಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಆರ್ಥಿಕ ಸಹಾಯದಿಂದ ಅಭಿವೃದ್ಧಿ ಪಡಿಸಲು ಈಗಾಗಲೇ ಮಂಜೂರಾಗಿರುವ ಕರಾವಳಿಯ ಪುರಸಭೆಗಳು ಎಷ್ಟು;